ಸರಿಯಾದ ಬೆಲೆ ಸಿಗದೇ ಇರುವುದರಿಂದ ಆಗಲೂ ಸಹಿತ ಬೆಳೆ ಬೆಳೆಯುವಂತಹ ರೈತ ಬಹಳ ಕ್ಷೀಣವಾಗುವಂತಹ ಸಂದರ್ಭ ಇದೆ. 5000 ರೂಪಾಯಿಗೆ ಮಾರುವಂತಹ ಮೆಣಸಿನಕಾಯಿ ಕೇವಲ 1500, 2000 ರೂಪಾಯಿ ಒಳಗೆ ಮಾರುತ್ತಾನೆ ಎಂದರೆ ಅವನು ಮಾಡಿರುವಂತಹ ಖರ್ಚಿಗೆ ಆ ಮೆಣಸಿನಕಾಯಿ ಮಾರಿದರೂ ಸಹಿತ ಸಾಲವನ್ನು ತೀರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆ ಕಾರಣದಿಂದ ಕೂಡಲೇ ಸರ್ಕಾರ ಇವತ್ತು ಮಧ್ಯಸ್ಥಿಕೆಯನ್ನು ವಹಿಸಿ ಎಲ್ಲಾ ಬೆಳೆಗಳಿಗೆ ಇವತ್ತು ಬೆಲೆಯನ್ನು ನಿಗದಿ ಮಾಡುವಂತಹ ಸಂದರ್ಭದಲ್ಲಿ ಮೆಣಸಿನಕಾಯಿಗೂ ಸಹಿತ ಬೆಲೆಯನ್ನು ನಿಗದಿ ಮಾಡಿರುವಂತಹ ಒಂದು ವ್ಯವಸ್ಥೆ ಮಾಡಿದರೆ ಬಹಳ ಸೂಕ್ತ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೆ, ಈಗ ಕೆಲವೊಂದು ಇಲಾಖೆಗಳು ಈ ವರ್ಷಕ್ಕೆ ಸಂಬಂಧಪಟ್ಟಂತಹ ಪರ್‌ಫಾರೆನ್ಸ್ ಆಫ್ ಬಜೆಟ್ ಪುಸ್ತಕವನ್ನು ಮಾನ್ಯ ಸದಸ್ಯರುಗಳಿಗೆ ಕಳಿಸಿಕೊಡಲಿಲ್ಲ. ಕೆಲವು ಇಲಾಖೆಗಳು ಪ್ರಿಂಟೇ ಮಾಡಿಲ್ಲ. ಉದಾಹರಣೆಗಾಗಿ ಕೃಷಿ ಮತ್ತು ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟಂತೆ 2005–06ನೇ ಸಾಲಿನ ಪರಫಾರ್ಮೆನ್ಸ್ ಆಫ್ ಬಜೆಟ್ ಸದಸ್ಯರಿಗೆ ಕೊಡದೇ ಇದ್ದರೆ ನಾವು ಏನಂತ ಮಾತನಾಡುವುದು? ಸುಮ್ಮನೇ ಮಾತನಾಡುವುದಾ? ಬರೇ ಅನ್ಯುಯಲ್ ರಿಪೋರ್ಟ್ 2004–05 ಕೊಟ್ಟಿದ್ದಾರೆ. How about 2005-06 Performance Budget?ಎಂದಾಗ ಗವರ್ನಮೆಂಟ್ ಸೈಡಿನಿಂದ ಏನು ಮಾಡಿದ್ದಾರೆಂದು ಸದಸ್ಯರಿಗೆ ಮಾಹಿತಿ ಕೊಡುವುದು ಬೇಡವಾ? ನಾನು ಹೋಗಿ ಅಲ್ಲಿ ಪುಸ್ತಕ ವಿತರಣೆ ಮಾಡುತ್ತಾರೆಂದು ಚೆಕ್ ಮಾಡಿಸಿದರೆ ಸುಮಾರು 25 ಇಲಾಖೆಗಳಲ್ಲಿ ಪರ್‌ಫಾರ್ಮೆನ್ಸ್ ಆಫ್ ಬಜೆಟ್ ಪುಸ್ತಕವನ್ನೇ ಕೊಟ್ಟಿಲ್ಲ. ಎಜುಕೇಶನ್ ಡಿಪಾರ್ಟ್‌ಮೆಂಟ್‌ನವರು ಬಿಟ್ಟು ಬೇರೆ ಇಲಾಖೆಯವರು ಕೊಟ್ಟಿಲ್ಲ. ಎಜುಕೇಶನ್ ಡಿಪಾರ್ಟ್‌ಮೆಂಟ್‌ನವರು ಮಾತ್ರ ಬಹಳ ಚೆನ್ನಾಗಿ ಪುಸ್ತಕವನ್ನು ಮಾಡಿದ್ದಾರೆ. ಅಗ್ರಿ ಕಲ್ಚರ್ ಇಲಾಖೆಯವರು ಮಾಡಲಿಲ್ಲ. ಟ್ರಾನ್ಸ್‌ಪೋರ್ಟ್ ಇಲಾಖೆಯವರು ಮಾಡಲಿಲ್ಲ. ಲೇಬರ್ ಇಲಾಖೆಯವರು ಮಾಡಲಿಲ್ಲ. ಹಾಗಾದರೆ ನಾವು ಮಾತನಾಡುವುದು ಹೇಗೆ? ಏನು ಸುಮ್ಮ ಸುಮ್ಮನೇ ಬಾಯಿಗೆ ಬಂದದ್ದೆಲ್ಲಾ ಮಾತನಾಡಿ ಬಿಡುವುದಾ? This is the failure of the Department. You must offer the departments.ನಾಳೆ ಒಳಗಾಗಿ ಎಲ್ಲ ಇಲಾಖೆಯ ಪರ್‌ಫಾರ್ಮೆನ್ಸ್ ಆಫ್ ಬಜೆಟ್ ಅನ್ನು ಮಾನ್ಯ ಸದಸ್ಯರಿಗೆ ಒದಗಿಸಿಕೊಡಬೇಕು ಎನ್ನುವಂತಹ ಆದೇಶವನ್ನು ತಾವು ಕಟ್ಟುನಿಟ್ಟಾಗಿ ಜಾರಿಗೆ ಕೊಟ್ಟರೆ ಆಮೇಲೆ ಮಾತನಾಡಿದರೆ ಉಪಯೋಗ ಆಗುತ್ತದೆ. ದಯಮಾಡಿ ತಾವು ಆ ಆದೇಶವನ್ನು ಮಾಡಿ. It is the responsi-

bility of the Legislature Secretariat to get them and supplied to the Members.ಎರಡನೆಯದಾಗಿ ಇನ್ನು ಮೇಲೆ ಮಾತನಾಡಿದರೆ ಏನು ಪ್ರಯೋಜನ ಆಗುತ್ತದೆ? ಯಾವ ಒಂದು ಪ್ರೆಸ್‌ನಿಂದ ಪ್ರತಿನಿಧಿಯವರು ಇಲ್ಲ. ಒಬ್ಬರೂ ಇಲ್ಲ ನೋಡಿ. ನಮ್ಮ ತೃಪ್ತಿಗಾಗಿ ಮಾತನಾಡಬೇಕಾ? ರೆಕಾರ್ಡ್ ಆಗಬಹುದು, ಆ ಮಾತು ಬೇರೆ. ಮಾನ್ಯ ಸದಸ್ಯರುಗಳು ಮಾತನಾಡಿದ್ದು, ಜನಗಳಿಗೆ ಗೊತ್ತಾಗುವುದು ಬೇಡವಾ? ಏನು ಅವರು ಹ್ಯಾಂಡ್ ಬಿಲ್ ಪ್ರಿಂಟ್ ಮಾಡಿ ಹಾಕುವುದಕ್ಕೆ ಆಗುತ್ತದಾ? ಸದನಕ್ಕೆ ಸಮಯ ಇದೆ, 6 ಗಂಟೆಯೋ ಐದೂವರೆ ಗಂಟೆಯೋ ಅಥವಾ 7 ಗಂಟೆನೋ ಆಗಲಿ. ಪ್ರೆಸ್‌ನವರು ಇರುವವರೆಗೆ ದಯವಿಟ್ಟು ಸದನವನ್ನು ನಡೆಸಬೇಕು. ಅದಕ್ಕೆ ಈಗ ಯಾರೂ ಇಲ್ಲದ ಮೇಲೆ ಸಭೆಯನ್ನು ಮುಂದುವರಿಸಿ ಚರ್ಚೆಯನ್ನು ನಾಳೆಗೆ ಮುಂದುವರಿಸುವುದು ಉತ್ತಮ ಎಂದು ನನ್ನ ಸಲಹೆ.

ಒಬ್ಬ ಮಾನ್ಯ ಸದಸ್ಯರು: ನಾಚಿಕೆ ಆಗುವಂತಹ ವಿಚಾರ.

ಶ್ರೀ ಶಿವರಾಜ್ ಸಜ್ಜನರ್: ಮಾನ್ಯ ರಾಯರೆಡ್ಡಿಯವರು ಹೇಳಿದ ಹಾಗೆ ಸಭೆಯನ್ನು ಮುಂದೂಡಿ, ನಾಳೆ ಇದರ ಬಗ್ಗೆ ಚರ್ಚೆ ಮಾಡಬಹುದು.

ಶ್ರೀ ಬಸವರಾಜ ರಾಯರೆಡ್ಡಿ: ಅವರ ಬಾಯಿ ಚಟಕ್ಕೆ ಮಾತನಾಡಬೇಕು ಅಷ್ಟೇ.

ಶ್ರೀ ಶಿವರಾಜ್ ಸಜ್ಜನರ್: ನಮ್ಮ ಮಾತಿಗೆ ಈ ಸದನದಲ್ಲಿ ಕಿಮ್ಮತ್ತೇ ಇಲ್ಲ.

ಶ್ರೀ ಡಿ. ಮಂಜುನಾಥ್(ಮಾನ್ಯ ಶಿಕ್ಷಣ ಸಚಿವರು): ಮಾನ್ಯ ಛೇರ್ಮನ್ ಅವರೇ, ಈಗ ಅವರು ಪ್ರಾರಂಭ ಮಾಡಿದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ: ಅಗ್ರಿಕಲ್ಚರ್ ಮಿನಿಸ್ಟರ್ ಇಲ್ಲ.

ಶ್ರೀ ಡಿ. ಮಂಜುನಾಥ್: ಮಾನ್ಯ ಸದಸ್ಯರು ಪ್ರಾರಂಭ ಮಾಡಿದ್ದಾರೆ. ಅವರಾದರು ಮುಗಿಸಲಿ.

ಒಬ್ಬ ಮಾನ್ಯ ಸದಸ್ಯರು: ಮಾತನಾಡುವವರ ಬಗ್ಗೆ ಇಲ್ಲಿ ಗೌರವನೇ ಇಲ್ಲ. ಪ್ರೆಸ್ ನವರು ಇಲ್ಲ, ಮಂತ್ರಿಗಳೂ ಇಲ್ಲ. ಯಾರ ಹತ್ತಿರ ಮಾತನಾಡಬೇಕು? ದಯವಿಟ್ಟು ಸಭೆಯನ್ನು ಮುಂದೂಡಿ ನಾಳೆ ಚರ್ಚೆ ಮಾಡುತ್ತೇವೆ.

ಶ್ರೀ ಬಸವರಾಜ ರಾಯರೆಡ್ಡಿ: ಅಧ್ಯಕ್ಷರೇ ಸಂಬಂಧಪಟ್ಟ ಮಾನ್ಯ ಕೃಷಿ ಸಚಿವರು ಇಲ್ಲ. ಯಾರಿಗೆ ಸದಸ್ಯರು ಹೇಳಬೇಕು?

ಶ್ರೀ ಡಿ. ಮಂಜುನಾಥ್: ಮಾನ್ಯ ತೋಟಗಾರಿಕಾ ಮಂತ್ರಿಗಳು ಇದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ: ಸಾರ್ ದಯಮಾಡಿ ಅರ್ಥ ಮಾಡಿಕೊಳ್ಳಿ. ಇಲ್ಲಿ ನಡೆಯುತ್ತಿರುವುದು ಬಜೆಟ್ ಬಗ್ಗೆ ಚರ್ಚೆ. ಬಜೆಟ್ ಬಗ್ಗೆ ಚರ್ಚೆ ಆಗುತ್ತಿದ್ದರೆ ಅಗ್ರಿಕಲ್ಚರ್ ಮಿನಿಸ್ಟರ್ ಇಲ್ಲ. ಹೇಳುವುದು ಯಾರಿಗೆ? ದಯವಿಟ್ಟು ಸದನವನ್ನು ಮುಂದೆ ಹಾಕಿ ನಾಳೆ ಚರ್ಚೆಯನ್ನು ಮುಂದುವರಿಸಬೇಕು ಎಂಡು ನಾನು ಮನವಿ ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ವಿರೋಧ ಪಕ್ಷದ ನಾಯಕರು): ನಾಳೆಗೆ ಮುಂದೂಡಿ ಸಭೆಯನ್ನು.

ಛೇರ್ಮನ್: ಇನ್ನು ಎರಡು ನಿಮಿಷ ಮಾತನಾಡಿ ಚರ್ಚೆಯನ್ನು...

ಶ್ರೀ ಬಿ.ಎಸ್. ಯಡಿಯೂರಪ್ಪ: ಇಲ್ಲ ಸಾರ್ ಶಾಸಕಾಂಗದ ಸಭೆ ಇದೆ. ನಾವು 6 ಗಂಟೆಯವರೆಗೆ ಕುಳಿತುಕೊಳ್ಳುತ್ತೇವೆಂದು ಹೇಳಿದ್ದೇವೆ. ಈಗ 6.30 ಆಗಿದೆ. ನಾಳೆ ತೆಗೆದುಕೊಳ್ಳಿ.

ಶ್ರೀ ಬಸವರಾಜರಾಯರೆಡ್ಡಿ: ಒಬ್ಬರೂ ಪ್ರೆಸ್‌ನವರೂ ಇಲ್ಲ.

ಶ್ರೀ ಕೆ. ಶ್ರೀನಿವಾಸ ಗೌಡ(ಮಾನ್ಯ ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೆ, ನಾನು ಕ್ಷೇಳಿಕೊಂಡು ಹೋಗಿದ್ದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಿಮ್ಮ ಬಗ್ಗೆ ನಮ್ಮದೇನೂ ಅಭ್ಯಂತರ ಇಲ್ಲ. ಈಗ ಪತ್ರಿಕೆಯವರು ಒಬ್ಬರೂ ಇಲ್ಲ ಈ ತರಹ ಆಗುವುದಿಲ್ಲ. ನಾಳೆ ಬೆಳಿಗ್ಗೆ ಸೇರೋಣ. 10 ಗಂಟೆಗೆ ಕಾಲ್ ಮಾಡೋಣ. ನಮ್ಮದೇನೂ ಅಭ್ಯಂತರ ಇಲ್ಲ. ನಾಳೆ ಹತ್ತು ಗಂಟೆಗೆ ಸೇರೋಣ. ಸದನದಲ್ಲಿ ನಾವು ಯಾರೂ ಇರುವುದಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ: ಅಧ್ಯಕ್ಷರೆ, ಚರ್ಚೆಯನ್ನು ನಾಳೆಗೆ ಮುಂದೂಡಿ. ನಾಳೆಗೆ ಹಾಕಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಹತ್ತು ಗಂಟೆಗೆ ಹಾಕಿ. ಹತ್ತು ಗಂಟೆಗೆ ಮುಂದು...

ಛೇರ್ಮನ್: ಇನ್ನು ಎರಡು ನಿಮಿಷ ಮಾತನಾಡಿ. ಸ್ವಲ್ಪ ಮುಂದುವರೆಸಿ. ಮಾನ್ಯ ಓಲೇಕಾರ್ ಅವರೇ ಮುಂದುವರೆಸಿ.

(ಗೊಂದಲ)

ಶ್ರೀ ಓಲೇಕಾರ್ ನೆಹರೂ ಚೆನ್ನಬಸಪ್ಪ: ಇನ್ನೂ ಮಾತನಾಡುವುದು ಬಹಳ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಶಾಸಕಾಂಗದ ಸಭೆ ಇದೆ. ನಾವ್ಯಾರೂ ಇರುವುದಿಲ್ಲ. ಬೇಕಾದರೆ ಸಭೆ ಮಾಡಿ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ವಿರೋಧ ಪಕ್ಷದ ನಾಯಕರೆ, ಚರ್ಚೆ ಮಾಡುವುದರಲ್ಲಿ ಅರ್ಥ ಇಲ್ಲ. ಯಾರೂ ಇಲ್ಲ.

(ಗೊಂದಲ)

ಶ್ರೀ ಬಸವರಾಜರಾಯರೆಡ್ಡಿ: ನಿಮಗೇ ನಾನು ಸಪೋರ್ಟ್ ಮಾಡುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನೂ ಅದನ್ನೇ ಹೇಳುತ್ತಿದ್ದೇನೆ.

ಶ್ರೀ ಬಸವರಾಜ ರಾಯರೆಡ್ಡಿ: ನಿಮಗೆ ನಾನು ಸಪೋರ್ಟ್ ಮಾಡುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಹೌದು ಅದಕ್ಕೇ ನಾನೂ ನಿಮಗೆ ಸಪೋರ್ಟ್ ಮಾಡುತ್ತಿದ್ದೇನೆ.

ಶ್ರೀ ಶಿವರಾಜ್ ಸಜ್ಜನರ್: ನಾಳೆಗೆ ಮುಂದೂಡಿ ಸಾರ್.

ಶ್ರೀ ತನ್ವೀರ್ ಸೇಠ್: (ಮಾನ್ಯ ಕಾರ್ಮಿಕ ಸಚಿವರು ಹಾಗೂ ಹಜ್ ರಾಜ್ಯ ಸಚಿವರು): ಮಾನ್ಯ ಸದಸ್ಯರು ನನ್ನ ಇಲಾಖೆಯ ವಿಚಾರದಲ್ಲಿ ಏನಾದರೂ ಮಾತನಾಡುವುದು ಇದ್ದರೆ ಮಾತನಾಡಲಿ. ನಮ್ಮ ಇಲಾಖೆಯದು ಇವತ್ತು ಮುಗಿಸಿ ಬಿಡಿ.

ಶ್ರೀ ಬಸವರಾಜ ರಾಯರೆಡ್ಡಿ: ಹೇಗೆ ಮುಗಿಸುತ್ತೀರಿ? ಅನ್ಯುಯಲ್ ರಿಪೋರ್ಟ್ ಇಲ್ಲ ಪರ್ ಫಾರ್ಮೆನ್ಸ್ ಆಫ್ ಬಜೆಟ್ ಇಲ್ಲ.

ಛೇರ್ಮನ್ : ಚರ್ಚೆಯನ್ನು ನಾಳೆಗೆ ಮುಂದುವರಿಸಲಾಗಿದೆ. ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 10.00 ಗಂಟೆಗೆ ಸೇರುವುದು.

(ಸದನವು ಸಂಜೆ 6:28ಕ್ಕೆ ಮುಕ್ತಾಯಗೊಂಡು ಪುನ: ದಿನಾಂಕ 14ನೇ ಜುಲೈ 2005ರ ಗುರುವಾರ ಬೆಳಿಗ್ಗೆ 10:00 ಗಂಟೆಗೆ ಸೇರಲು ನಿಶ್ಚಯಿಸಿತು)